ಅಸಲು ದಾವೆ ನಂ.ಃ165/2014

ಡಿಡಬ್ಲ್ಯೂ - 1

ದಿನಾಂಕ 02-07-2018 ರಂದು ಪುನಃ ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ಶ್ರೀ ಬಿ.ಬಿ ವಕೀಲರಿಂದ.**

ವಾದಿಯು ನನ್ನ ಮೇಲೆ ಏಕೆ ಈ ದಾವೆ ಸಲ್ಲಿಸಿದ್ದಾನೆ ಎನ್ನುವುದು ನನಗೆ ಗೊತ್ತಿದೆ. ಹಾಲಗಡ್ಲ ಗ್ರಾಮದಲ್ಲಿ ವಾದಿಯರಿಗೆ ಸೇರಿದ ಒಂದು ಮನೆ ಇದೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ನಮ್ಮದು ಕೂಡ ಒಂದು ಮನೆ ಇದೆ ಎನ್ನುತ್ತಾರೆ. ವಾದಿಯರ ಮನೆಯ ನಂಬರ 3-1 ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ತಮ್ಮ ಕುಟುಂಬದ ಆಸ್ತಿಗಳನ್ನು 2013 ನೇ ಇಸವಿಯಲ್ಲಿ ಹಂಚಿಕೊಂಡಿದ್ದಾರೆ ಎಂದರೆ ಸರಿ ಅಲ್ಲ. ವಾದಿಯರ ಮನೆಯ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ ಅಲ್ಲ. ವಾದಿಯರ ಮನೆಯ ಪಶ್ಚಿಮಕ್ಕೆ ರ್‍ಯಾವನೂರ ಪೂಜಾರಿಯ ಮನೆ ಇದೆ ಎಂದರೆ ಸರಿ. ವಾದಿಯರ ಮನೆಯ ಉತ್ತರಕ್ಕೆ ಮಲ್ಕಪ್ಪ ಪೂಜಾರಿಯ ಮನೆ ಇದೆ ಎಂದರೆ ಸರಿ ಅಲ್ಲ, ಸಾಕ್ಷಿದಾರರು ಮುಂದುವರೆದು ಸರಕಾರಿ ರಸ್ತೆ ಇದೆ ಎನ್ನುತ್ತಾರೆ. ವಾದಿಯ ಮನೆಯ ದಕ್ಷಿಣಕ್ಕೆ ಇಜೇರಿ ಗ್ರಾಮಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ಹಾಲಗಡ್ಲ ಗ್ರಾಮದಲ್ಲಿ ನನಗೆ ಸೇರಿದ ಒಂದು ಮನೆ ಇದೆ. ಈಗ ನಾನು ಒಂದು ಮನೆ ಕಟ್ಟುತ್ತಿದ್ದೇನೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಅದು ಬೇರೆ ಆಸ್ತಿ ಇದೆ ದಾವಾ ಆಸ್ತಿಗೆ ಸಂಬಂಧವಿಲ್ಲ ಎನ್ನುತ್ತಾರೆ. ನನ್ನ ಮನೆಯ ನಂಬರ ನನಗೆ ಈಗ ನೆನಪಿಲ್ಲ. ನನ್ನ ಮನೆಯ ವಿಸ್ತೀರ್ಣ ಪೂರ್ವ - ಪಶ್ಚಿಮದ ಉದ್ದ 30 ಅಡಿ, ಉತ್ತರ - ದಕ್ಷಿಣ 40 ಅಡಿ. ನಿಮ್ಮ ಮನೆಯಲ್ಲಿ ಎಷ್ಟು ಕೋಣೆಗಳಿವೆ ಎಂದರೆ ಸಾಕ್ಷಿದಾರರು ನನ್ನ ಮನೆಯು ಕಲ್ಲಿನಿಂದ ಕಟ್ಟಿದ ಮನೆಯು ಆಗಿರುವುದಿಲ್ಲ ಬದಲಾಗಿ ತಗಡಿನಿಂದ ಮಾಡಿದ ಒಂದು ಶೆಡ್ಡು ಇದೆ ಅದರ ಮುಂದೆ ಸ್ವಲ್ಪ ಭಾಗ ಚಪ್ಪರ ಹಾಕಲಾಗಿದೆ ಎನ್ನುತ್ತಾರೆ. ತಗಡಿನಿಂದ ಮಾಡಿದ ಶೆಡ್ಡಿನ ಉದ್ದ 15 ಅಡಿ ಮತ್ತು ಅಗಲ 12 ಅಡಿ ಇದೆ. ನನ್ನ ತಗಡಿನ ಶೆಡ್ಡಿಗೆ ಬಾಗಿಲು

ಕೂಡಿಸಲಾಗಿದೆ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ತಗಡಿನ ಶೆಡ್ಡಿನ ಉದ್ದ 15 ಅಡಿ ಮತ್ತು ಅಗಲ 12 ಅಡಿ ಇದೆ ಎಂದು ಬರೆಸಲಾಗಿಲ್ಲ ಬದಲಾಗಿ ನನ್ನ ತಗಡಿನ ಶೆಡ್ಡು ಇರುವ ಜಾಗ ನನಗೆ ಸೇರಿದೆ ಎಂದು ಬರೆಸಲಾಗಿದೆ. ನನ್ನ ಮನೆ ಮತ್ತು ಜಾಗದ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ 1 ನೇ ವಾದಿಯ ಜಾಗ, ಉತ್ತರಕ್ಕೆ ಸರಕಾರಿ ರಸ್ತೆ, ದಕ್ಷಿಣಕ್ಕೆ ಒಬ್ಬ ಯಲ್ಲಪ್ಪ ಇವರಿಗೆ ಸೇರಿದ ಜಾಗವಿದೆ. ನನ್ನ ಮನೆಯಲ್ಲಿಯೇ ನನ್ನ ಎಲ್ಲಾ ಕುಟುಂಬದ ಸದಸ್ಯರು ಇರುತ್ತೇವೆ ಎಂದರೆ ಸರಿ. ನಾನು ಈಗ ವಾಸ ಮಾಡುತ್ತಿರುವ ಜಾಗವು ನಮ್ಮ ಮಾವನಿಗೆ ಸೇರಿದೆ ಎಂದರೆ ಸರಿ ಅಲ್ಲ. ನಿನಗೆ ಸೇರಿದ ಜಾಗವು ನಿನಗೆ ಹೇಗೆ ಬಂದಿದೆ ಎಂದರೆ ಸಾಕ್ಷಿದಾರರು ಸರಕಾರದಿಂದ ಮಂಜೂರು ಆಗಿದೆ ಎನ್ನುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ನಮ್ಮ ಮನೆ ಮಂಜೂರಾದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿರುವ ಮನೆಯು ನನ್ನ ತಂದೆ ಸತ್ತ ನಂತರ ನನ್ನ ಹೆಸರಿನಲ್ಲಿ ವಾರಸದ ಪ್ರಕಾರ ಮುಟೇಶನ್ ಆಗಿದೆ. ನನ್ನ ಹೆಸರಿನಲ್ಲಿ ಮುಟೇಶನ್ ಆದ ಬಗ್ಗೆ ಇರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಈಗ ನಾನು ವಾಸಿಸುತ್ತಿರುವ ಮನೆಯನ್ನು ಹೊರತುಪಡಿಸಿ ಇನ್ನೊಂದು ಮನೆ ನನಗೆ ಸರಕಾರದಿಂದ ಮಂಜೂರು ಆಗಿದೆ ಎಂದರೆ ಸರಿ ಅಲ್ಲ. ಈ ಹಂತದಲ್ಲಿ ಸಾಕ್ಷಿದಾರರಿಗೆ ವಾದಿಯರ ಪರ ವಕೀಲರು ಒಂದು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಕಂಡುಬರುವ ತಗಡಿನ ಶೆಡ್ಡು ನಿಮಗೆ ಸೇರಿದೆ ಎಂದು ಸಾಕ್ಷಿದಾರರಿಗೆ ಪ್ರಶ್ನೆ ಮಾಡಿದಾಗ ಸಾಕ್ಷಿದಾರರು ಹೌದು ಎಂದು ಒಪ್ಪಿಕೊಂಡಿದ್ದಾರೆ. ಸಾಕ್ಷಿದಾರರು ಸದರಿ ಭಾವಚಿತ್ರದಲ್ಲಿ ಕಾಣುವ ಶೆಡ್ಡು ತನಗೆ ಸೇರಿದೆ ಎಂದು ಒಪ್ಪಿಕೊಂಡಿರುವುದರಿಂದ ಸದರಿ ಭಾವಚಿತ್ರವನ್ನು ವಾದಿಯರ ಪರ ದಾಖಲೆಯಾಗಿ ನಿಶಾನೆಗೊಳಪಡಿಸಲು ವಾದಿ ಪರ ವಕೀಲರು ಮನವಿ ಮಾಡಿರುತ್ತಾರೆ ಅದಕ್ಕೆ 1 ನೇ ಪ್ರತಿವಾದಿಯ ಪರ ವಕೀಲರು ಸದರಿ ಭಾವಚಿತ್ರದ ಜೊತೆ ಸಿಡಿ ಇಲ್ಲದೆ ಇರುವುದರಿಂದ ಅದನ್ನು ನಿಶಾನೆಗೊಳಪಡಿಸಬಾರದೆಂದು ಆಕ್ಷೇಪಣೆ ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಭಾವಚಿತ್ರದಲ್ಲಿರುವ ಶೆಡ್ಡು ತನಗೆ ಸೇರಿದೆ ಎಂದು ಒಪ್ಪಿಕೊಂಡಿರುವುದರಿಂದ 1 ನೇ ಪ್ರತಿವಾದಿ ಪರ ವಕೀಲರ ಆಕ್ಷೇಪಣೆಯನ್ನು ತಳ್ಳಿಹಾಕಿ ಸದರಿ ಭಾವಚಿತ್ರವನ್ನು ನಿಪಿ-17 ಎಂದು ಗುರುತಿಸಲಾಯಿತು. ನನ್ನ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವಂತೆ ಇರುವ ಆಸ್ತಿ ನಂಬರ 3-236/1 ಕ್ಕೆ ತಪ್ಪು ಬೌಂಡರಿಗಳನ್ನು ತೋರಿಸಿ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ನನ್ನ ತಗಡಿನ ಶೆಡ್ಡು ನನ್ನ ಆಸ್ತಿ ನಂಬರ 3-236/1 ರಲ್ಲಿ ಇಲ್ಲ ಎಂದರೆ ಸರಿ ಅಲ್ಲ. ವಾದಿಯ ಮನೆಗೆ ಹೋಗುವ ದಾರಿಯಲ್ಲಿ ತಗಡಿನ ಶೆಡ್ಡು ನಿರ್ಮಿಸಿ ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿ ಅಲ್ಲ. ವಾದಿಯರಿಗೆ ಸೇರಿದ ಜಾಗವನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ